<u>ದಿನಾಂಕಃ **03/02/2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.</u>

**<u>ಪಾಟೀ ಸವಾಲುಃ ಪ್ರತಿವಾದಿ ಪರವಾಗಿ ಶ್ರೀ ಹೆಚ್ ಪಿ ಎಸ್ ವಕೀಲರಿಂದಃ</u>**

1. ನನ್ನ ತಂದೆಯವರು ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಬೇರೆಯವರಿಗೆ ದಾನ ಪತ್ರ ಮಾಡಿದ್ದರು ಆ ಕಾರಣದಿಂದ ಈ ದಾವೆಯನ್ನು ದಾಖಲು ಮಾಡಿದ್ದೇನೆ. ಈ ದಾವೆಯನ್ನು ಎಂ.ಕೆ.ತಿಮ್ಮೇಗೌಡ ಹಾಗೂ ಬಿ.ಟಿ.ಚಂದ್ರಶೇಖರ್ ರವರ ವಿರುದ್ಧ ಮಾಡಿರುತ್ತೇನೆ. ನನ್ನ ತಂದೆಯ ತಂದೆಯ ಹೆಸರು ಎಂ.ಜಿ.ಕೃಷ್ಣೇಗೌಡ. ಎಂ.ಜಿ.ಕೃಷ್ಣೇಗೌಡ ರವರಿಗೆ ಒಟ್ಟು 6 ಜನ ಮಕ್ಕಳು. ಎಂ.ಜಿ.ಕೃಷ್ಣೇಗೌಡರ ಕುಟುಂಬದಿಂದ ನನ್ನ ತಂದೆಗೆ ಹಿಸ್ಸೆ ಬಂದಿತ್ತು. ಆ ಹಿಸ್ಸೆಯಲ್ಲಿ ಯಾವ ಸರ್ವೇ ನಂಬರಿನ ಹಾಗೂ ಎಷ್ಟು ವಿಸ್ತೀರ್ಣದ ಸ್ವತ್ತುಗಳು ಬಂದಿದ್ದವು ಎಂದು ಹೇಳಲು ಆಗುವುದಿಲ್ಲ, ಗದ್ದೆಗಳು ಬಂದಿದ್ದವು. ದಾವಾ ಸರ್ವೇ ನಂಬರ್ ಆಸ್ತಿಗಳನ್ನು ಒಟ್ಟು ಕುಟುಂಬದ ಸ್ವತ್ತುಗಳು ಹಿಸ್ಸೆಯಲ್ಲಿ ಬರುವ ಮೊದಲೇ ಖರೀದಿಸಲಾಗಿತ್ತು. ಆ ಕಾರಣದಿಂದಾಗಿ ದಾವಾ ಸ್ವತ್ತು ಸ್ವಯಾರ್ಜಿತ ಸ್ವತ್ತು ಎಂದರೆ ಸರಿಯಲ್ಲ ಅದು ಒಟ್ಟು ಕುಟುಂಬದ ಸ್ವತ್ತು. ನನ್ನ ತಂದೆಗೆ ಹಿಸ್ಸೆಯಲ್ಲಿ ಬಂದಿದ್ದಂತಹ ಸ್ವತ್ತುಗಳು ಮಳೆಯ ಆಶ್ರಿತ ಜಮೀನುಗಳು ಎಂದರೆ ಸರಿ. ನನ್ನ ತಂದೆಗೆ ಹಿಸ್ಸೆಯಲ್ಲಿ ಬಂದಿದ್ದಂತಹ ಸ್ವತ್ತುಗಳಿಂದ ಬರುತಿದ್ದ ಉತ್ಪತ್ತಿ ಕುಟುಂಬದ ನಿರ್ವಹಣೆಗೆ ಸಾಕಾಗುತಿತ್ತು ಎಂದರೆ ಸರಿ. ನನ್ನ ತಂದೆಯವರು I.T.C ಕಂಪನಿಯ agency ಪಡೆದುಕೊಂಡಿದ್ದರು, ಮಂಗಳೂರು ಹಂಚಿನ ಮಾರಾಟದ ವ್ಯವಹಾರ ಮಾಡುತಿದ್ದರು, ಮಧ್ಯಲಕ್ಷ್ಮೀ ಟ್ರಸ್ಟನ್ನು ನಡೆಸುತಿದ್ದರು ಎಂದರೆ ಸರಿಯಲ್ಲ. ಮಧ್ಯಲಕ್ಷ್ಮೀ ಟ್ರಸ್ಟನ್ನು ಆಂಧ್ರ ದವರು ಮಾಡಿಕೊಂಡಿದ್ದರು. ನನ್ನ ತಂದೆಯವರಿಗೆ ಮೇಲೆ ಹೇಳಿದ ಎಲ್ಲಾ ವ್ಯವಹಾರಗಳು ಇದ್ದು ಅವರಿಗೆ ಸಾಕಷ್ಟು ಸಂಪಾದನೆ ಇತ್ತು ಎಂದರೆ ಸರಿಯಲ್ಲ. ನನ್ನ ತಂದೆಯವರು ಎಲ್ಲಾ ಮಕ್ಕಳಿಗೂ ವಿದ್ಯಾಭ್ಯಾಸ ಕೊಡಿಸಿರುತ್ತಾರೆ ಎಂದರೆ ಸರಿ. ನನ್ನ ವಿದ್ಯಾಭ್ಯಾಸವು 1986-87 ರಲ್ಲಿ ಮುಕ್ತಾಯಗೊಂಡಿತ್ತು. ನನ್ನ ಅಣ್ಣ ಸತ್ಯನಾರಾಯಣ ಹಾಗೂ ರಂಗಸ್ವಾಮಿಯವರ ವಿದ್ಯಾಭ್ಯಾಸ ಯಾವಾಗ ಮುಕ್ತಾಯವಾಯಿತು ಎಂದು ಹೇಳಲು ಆಗುವುದಿಲ್ಲ. ನನ್ನ ಹಾಗೂ ನನ್ನ ಅಣ್ಣಂದಿರ ವಿದ್ಯಾಭ್ಯಾಸ ಮುಗಿಯುವವರೆಗೆ ನಮಗೆ ಯಾವುದೇ ಕೆಲಸ ಇರಲಿಲ್ಲ ಹಾಗೂ ಬೇರೆ ಆದಾಯದ ಮೂಲಗಳು ಇರಲಿಲ್ಲ ಎಂದರೆ ಸರಿ. ಸಾಕ್ಷಿದಾರರು ಮುಂದುವರೆದು ಜಮೀನಿನ ಸಾಗುವಳಿಯನ್ನು ನನ್ನ ಅಣ್ಣಂದಿರು ಮಾಡುತಿದ್ದರು. ಜಮೀನಿನ ಸಾಗುವಳಿಯನ್ನು ನನ್ನ ತಂದೆಯೊಡನೆ ಸೇರಿ ಮಾಡುತಿದ್ದೆವು.

2. ಕೊಡಕಳ್ಳಿ ಗ್ರಾಮದ ಸರ್ವೇ ನಂ.65/3 ರ 4 ಎಕರೆ, ಸರ್ವೇ ನಂ.102 ರಲ್ಲಿ 3 ಎಕರೆ 5 ಗುಂಟೆ, ದೊಡ್ಡಮಗ್ಗೆ ಗ್ರಾಮದ ಸರ್ವೇ ನಂ.34/6 ರಲ್ಲಿ 7 ಗುಂಟೆ ಜಮೀನುಗಳು ಕ್ರಯಕ್ಕೆ ಪಡೆದ ಆಸ್ತಿಗಳು ಎಂದರೆ ಸರಿ. ಸರ್ವೇ ನಂ.34/6 ರ 7 ಗುಂಟೆಯಲ್ಲಿ ತಿಮ್ಮೇಗೌಡರು ಮನೆ ಕಟ್ಟಿದ್ದರು ಎಂದರೆ ಸರಿಯಲ್ಲ. ದೊಡ್ಡಮಗ್ಗೆಯಲ್ಲಿರುವ ಮನೆಯನ್ನು ನನ್ನ ತಂದೆ ಕಟ್ಟಿಸಿದ್ದರು ಎಂದರೆ ಸರಿಯಲ್ಲ ಆದರೆ ನನ್ನ ತಾತ ಕಟ್ಟಿಸಿದ್ದರು. ದಾವಾ ಸರ್ವೇ ನಂಬರ್ ಸ್ವತ್ತನ್ನು 1970 ರಲ್ಲಿ ಖರೀದಿ ಮಾಡಲಾಗಿದೆ. ಮನೆಯ ವ್ಯವಹಾರಗಳನ್ನೆಲ್ಲಾ ನಾವು ವಿದ್ಯಾಭ್ಯಾಸ ಮುಗಿಸುವವರೆಗೆ ನನ್ನ ತಂದೆಯೇ ನೋಡಿಕೊಳ್ಳುತಿದ್ದರು ಎಂದರೆ ಸರಿ. ದಾವಾ ಸ್ವತ್ತನ್ನು ಖರೀದಿಸುವ ಕಾಲಕ್ಕೆ ನನ್ನ ತಂದೆಯವರಿಗೆ ಪಿತ್ರಾರ್ಜಿತ ಸ್ವತ್ತುಗಳಿಂದ ಯಾವುದೇ ಆದಾಯ ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಸರ್ವೇ ನಂಬರ್ ಸ್ವತ್ತನ್ನು ಖರೀದಿಸುವಾಗ ಒಂದು ಮನೆ ಇತ್ತು ಅದರಲ್ಲಿ 1ನೇ ಪ್ರತಿವಾದಿ ವಾಸವಿದ್ದರು ಎಂದರೆ ಸರಿಯಲ್ಲ. ಬರಗೂರು ಗ್ರಾಮದಲ್ಲಿ 2ನೇ ಪ್ರತಿವಾದಿ ಅವರ ತಾಯಿಯ ಜೊತೆಯಲ್ಲಿ ವಾಸವಿದ್ದರು ಎಂದರೆ ಸರಿಯಲ್ಲ. ಬರಗೂರು ಗ್ರಾಮದಲ್ಲಿ ನನ್ನ ತಂದೆ ಯಾವ ವರ್ಷದಿಂದ ವಾಸವಿದ್ದಾರೆ ಎಂದು ಗೊತ್ತಿಲ್ಲ. ನನ್ನ ತಂದೆಯವರು 1970 ರಿಂದ 2ನೇ ಪ್ರತಿವಾದಿ ಹಾಗೂ ಅವರ ತಾಯಿಯೊಡನೆ ವಾಸವಿದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆಯವರು ಬರಗೂರು ಗ್ರಾಮದಲ್ಲಿ ಹಾಗೂ ನಮ್ಮ ಊರು ದೊಡ್ಡಮಗ್ಗೆಯಲ್ಲಿ ಸಹ ವಾಸವಿದ್ದರು ಎಂದರೆ ಸರಿ. ಯಾವುದೇ ಕುಟುಂಬದ ವ್ಯವಹಾರವನ್ನು ಮಾಡಬೇಕೆಂದರೆ ನಮ್ಮ ತಂದೆಯವರು ನಮ್ಮ ಮೂಲಕ ಮಾಡಿಸುತಿದ್ದರು ಎಂದರೆ ಎಲ್ಲರೊಡನೆಯೂ ನನ್ನ ತಂದೆ ಚೆನ್ನಾಗಿದ್ದರು ಎಂದು ನುಡಿಯುತ್ತಾರೆ. ಆ ರೀತಿ ಚೆನ್ನಾಗಿದ್ದದ್ದನ್ನು ದುರುಪಯೋಗಪಡಿಸಿಕೊಂಡು ಒಂದು ಪಾಲುಪಟ್ಟಿಯನ್ನು ಸೃಷ್ಟಿ ಮಾಡಲಾಗಿತ್ತು ಎಂದರೆ ಸರಿಯಲ್ಲ. ಪಾಲು ಪಟ್ಟಿಯು ದಿಃ 15-01-1990 ರಲ್ಲಿ ಆಗಿರುತ್ತದೆ. ಆ ಪಾಲುಪಟ್ಟಿಯಲ್ಲಿ ಪಿತ್ರಾರ್ಜಿತ ಆಸ್ತಿಗಳನ್ನು ಸೇರಿಸಿಲ್ಲ ಎಂದರೆ ಸರಿ. ಆ ಪಾಲುಪಟ್ಟಿಯಲ್ಲಿ ನಮ್ಮ ತಂದೆಯ ಸ್ವಯಾರ್ಜಿತ ಆಸ್ತಿಗಳನ್ನು ಮಾತ್ರ ಸೇರಿಸಲಾಗಿತ್ತು ಎಂದರೆ ಒಟ್ಟು ಕುಟುಂಬದ ಆಸ್ತಿಗಳು ಎಂದು ನುಡಿಯುತ್ತಾರೆ. ಪಾಲುಪಟ್ಟಿಯನ್ನು ಕಾಳಯ್ಯ ಎಂಬುವವರು ಬರೆದಿರುವರು. ಪಾಲುಪಟ್ಟಿಗೆ ಸಾಕ್ಷಿದಾರರಾಗಿ ಯಾರ್ಯಾರು ಸಹಿ ಮಾಡಿದ್ದಾರೆ ಎಂದು ಜ್ಞಾಪಕ ಇಲ್ಲ. ಮೂಲ ಪಾಲುಪಟ್ಟಿ ನನ್ನ ಬಳಿ ಇರುತ್ತದೆ. ನಮ್ಮ ತಂದೆಗೆ ಸಂಬಂಧಪಟ್ಟ ಸ್ವಯಾರ್ಜಿತ ಆಸ್ತಿಗಳಿಗೆ ಸಂಬಂಧಿಸಿದಂತೆ ನಮ್ಮ ತಂದೆಗೆ ತಿಳಿಯದಂತೆ ನಾವೇ ಪಾಲುಪಟ್ಟಿಯನ್ನು ಸೃಷ್ಟಿ ಮಾಡಿ ನನ್ನ ಬಳಿಯೇ ಇಟ್ಟುಕೊಂಡಿರುತ್ತೇನೆ ಎಂದರೆ ಸಾಕ್ಷಿದಾರರು ನನ್ನ ತಂದೆಯವರೇ ಪಾಲುಪಟ್ಟಿಯನ್ನು ಇಟ್ಟುಕೊಳ್ಳಲು ನೀಡಿದ್ದರು ಎಂದು ನುಡಿಯುತ್ತಾರೆ. ಪಾಲುಪಟ್ಟಿಯಲ್ಲಿ

ಬರೆದಿರುವ ಸಂಗತಿಗಳನ್ನು ಓದಿ ತಿಳಿದುಕೊಂಡಿದ್ದೇನೆ. ನಿಪಿ-36 ಸದರಿ ಪಾಲುಪಟ್ಟಿಯಾಗಿರುತ್ತದೆ. ಸದರಿ ಪಾಲುಪಟ್ಟಿಯಲ್ಲಿ ನನ್ನ ತಂದೆಗೆ ಹಿಸ್ಸೆ ತೋರಿಸಿಲ್ಲ. ನನ್ನ ತಂದೆಗೆ ಹಿಸ್ಸೆಯನ್ನು ನೀಡಲಾಗಿದೆಯೋ ಇಲ್ಲವೋ ಎಂದು ಪಾಲುಪಟ್ಟಿಯಲ್ಲಿ ನೋಡಿಲ್ಲ. ಅದರಿಂದಾಗಿ ನನಗೆ ನಿಪಿ-36ರ ಪಾಲುಪಟ್ಟಿಯ ಸಂಪೂರ್ಣ ಮಾಹಿತಿ ಇಲ್ಲ. ನಿಪಿ-36 ರ ಪಾಲುಪಟ್ಟಿ ನಮ್ಮ ತಂದೆಗೆ ತಿಳಿದಿಲ್ಲ ಎಂದರೆ ಸರಿಯಲ್ಲ. ನಿಪಿ-36 ರಲ್ಲಿ ನನ್ನ ತಂದೆಯ ಸಹಿ ಇರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆಯವರಿಗೆ ನಿಪಿ-36 ರ ಪಾಲುಪಟ್ಟಿಯ ವಿಷಯ ಈ ದಾವೆ ದಾಖಲಿಸಿದ ನಂತರ ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ. ನನ್ನ ತಂದೆ ಒಂದು ವೇಳೆ ನಿಪಿ-36ರ ಪಾಲುಪಟ್ಟಿಯನ್ನು ಮಾಡಿಕೊಟ್ಟಿದ್ದರೆ ಅದರ ಮೂಲ ಪ್ರತಿ ಅವರ ಬಳಿಯೇ ಇರುತಿತ್ತು ಎಂದರೆ ಸರಿಯಲ್ಲ. ನನ್ನ ತಂದೆಯ ಹೆಚ್ಚು ಬೆಲೆಬಾಳುವ ಸ್ವತ್ತಿಗೆ ಸಂಬಂಧಪಟ್ಟಂತೆ ಮಾತ್ರ ಪಾಲುಪಟ್ಟಿಯನ್ನು ಬರೆಯಲಾಗಿದೆ ಎಂದರೆ ಸರಿಯಲ್ಲ. ನಿಪಿ-36 ರ ಪಾಲುಪಟ್ಟಿಯಲ್ಲಿ ಅವರಿಗೆ ಉದ್ದೇಶಪೂರ್ವಕವಾಗಿ ಹಿಸ್ಸೆ ತೋರಿಸಿಲ್ಲ ಎಂದರೆ ಸರಿಯಲ್ಲ.

3. ನನ್ನ ತಂದೆಯವರಿಗೆ ಒಟ್ಟು 6 ಜನ ಮಕ್ಕಳು. ನಿಪಿ-36 ರ ಪಾಲುಪಟ್ಟಿಯಲ್ಲಿ ಹೆಣ್ಣು ಮಕ್ಕಳಿಗೆ ಹಾಗೂ ನನ್ನ ತಾಯಿಗೆ ಹಿಸ್ಸೆ ತೋರಿಸಿಲ್ಲ ಕಾರಣ ಅವರು ಹಿಸ್ಸೆ ಬೇಡ ಎಂದು ತಿಳಿಸಿರುತ್ತಾರೆ.

ಮುಂದುವರೆದ ಪಾಟೀ ಸವಾಲು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇದೆ.

ಸಹಿ /-

(ನಾಗೇಶ ಮೂರ್ತಿ ಬಿ.ಕೆ)

ಸೀನಿಯರ್ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,

ಅರಕಲಗೂಡು